# ಕಪ್ಪೆ ಹಿಡಿಯುವವನ ಹೆಂಡತಿ



**ಬಿ. ಜನಾರ್ದನ ಭಟ್**

ಕಲೆ: ಸಂತೋಷ್ ಸಸಿಹಿತ್ಲು

ಮಂಚದಬೈಲು ಮಠದ ಆನೆಗೆ ಮರಳು ಕಳ್ಳ ಸಾಗಾಟದ ಲಾರಿ ಡಿಕ್ಕಿ ಹೊಡೆದ ಸುದ್ದಿ ಕೇಳಿ ಜಯಂತ ಆತಂಕಗೊಂಡ. ಸುದ್ದಿ ಹೇಳಿದವನು ಕಪ್ಪೆ ಹಿಡಿಯುವ ಬಸಪ್ಪ. ಎಲ್ಲಿ, ಏನು, ಹೇಗೆ ಎನ್ನುವುದನ್ನು ಇನ್ನಷ್ಟೆ ಅವನು ವಿವರಿಸಬೇಕು.

ಜಯಂತನಿಗೆ ಒಂದು ವಿಶೇಷ ಕಾರಣಕ್ಕಾಗಿ ಆನೆಯ ಬಗ್ಗೆ ಒಂದು ಆತ್ಮೀಯತೆ ಬೆಳೆದಿತ್ತು. ಅವನು ಆಗಾಗ ಅದಕ್ಕೆ ಬಾಳೆಹಣ್ಣುಗಳನ್ನಾಗಲಿ, ದವಸಧಾನ್ಯಗಳನ್ನಾಗಲಿ ಒಯ್ದು ಕೊಡುತ್ತಿದ್ದದ್ದಿತ್ತು. ಅಥವಾ ಮನಸ್ಸಿಗೆ ತೋಚಿದಾಗ ಕಪ್ಪೆ ಹಿಡಿಯುವ ಬಸಪ್ಪನಿಗೆ ಹಣಕೊಟ್ಟು ಮಠದ ಆನೆಗೆ ಹಾಕಲು ಸೊಪ್ಪುಸದೆಗಳನ್ನು ಕಳುಹಿಸಿಕೊಡುತ್ತಿದ್ದದ್ದೂ ಇತ್ತು.

ಆನೆಗೆ ಅಪಘಾತವಾದ ಸುದ್ದಿಯನ್ನು ಜಯಂತನಿಗೆ ಹೇಳಿದ ಕಪ್ಪೆ ಹಿಡಿಯುವ ಬಸಪ್ಪ ಜಯಂತನ ಮನೆಗೆ ತೆಂಗಿನಕಾಯಿ ಕೊಯ್ಯುವ ಕೆಲಸಕ್ಕೆ ಬಂದಾಗ ಹೊತ್ತುತಂದ ಹಲವು ಸುದ್ದಿಗಳಲ್ಲಿ ಇದು ಮುಖ್ಯವಾದದ್ದು. ಕಪ್ಪೆ ಹಿಡಿಯುವ ಬಸಪ್ಪ ಎನ್ನುವ ಹೆಸರು ಬಸಪ್ಪನಿಗೆ ಉಳಿದಿದ್ದರೂ ಈಗ ಅವನು ಕಪ್ಪೆ ಹಿಡಿಯುವ ಕೆಲಸ ಮಾಡುತ್ತಿಲ್ಲ; ಹಿಡಿಯಲಿಕ್ಕೆ ಈಗ ಊರಿನಲ್ಲಿ ಕಪ್ಪೆಗಳೂ ಇಲ್ಲ. ಕಪ್ಪೆಗಳಿರುವ ಗದ್ದೆಗಳೂ ಇಲ್ಲ. ಆ ಉದ್ಯೋಗಕ್ಕೆ ದಾತಾರರೂ ಇಲ್ಲ. ಅಂತಹ ಒಂದು ಉದ್ಯೋಗ ಇತ್ತು ಎಂದರೆ ನಂಬುವವರೂ ಇಲ್ಲ.

ಬಸಪ್ಪ ಈಗ ಊರಿನ ಏಕೈಕ ಖಾಯಮ್ ಕೂಲಿಯಾಳಾಗಿ ಎಲ್ಲರಿಗೂ ಬೇಕಾದವನು. ಅವನು ಒಂದಾನೊಂದು ಕಾಲದಲ್ಲಿ ಈ ಊರಿಗೆ ಕಪ್ಪೆ ಹಿಡಿಯಲು ಬಂದಿದ್ದವನಂತೆ. ಆಗ ಅವನ ಹೆಂಡತಿ ಚೆನ್ನಮ್ಮ ಅವನ ಜತೆಗೆ ಬಂದಿದ್ದಳು. ಅವಳೂ ಗಂಡನ ಜತೆಗೆ ಕಪ್ಪೆ ಹಿಡಿದಿದ್ದಳು. ಗಂಡ ಹೆಂಡತಿ ಮಂಚದಬೈಲಿನ ವಿಶಾಲವಾದ, ನೀರು ತುಂಬಿದ ಗದ್ದೆ ಬೈಲುಗಳ ನಡುವೆ ನರಗಳಂತೆ ಅಡ್ಡ ನೀಟಕ್ಕೆ ಕಟ್ಟಿದ್ದ ಬದುಗಳ ಮೇಲೆಲ್ಲ ಓಡಾಡುತ್ತ ಕಪ್ಪೆಗಳನ್ನು ಹಿಡಿದು ತಮ್ಮ ಜೋಳಿಗೆಯಲ್ಲಿ ತುಂಬಿಸಿಕೊಳ್ಳುತ್ತ ತಿರುಗಾಡುತ್ತಿದ್ದರು. ಕಪ್ಪೆಗಳನ್ನು ಕೊಳ್ಳುವ ಮಧ್ಯವರ್ತಿಗೆ ಅವನ್ನು ಮೂರುಕಾಸಿಗೆ ಮಾರುತ್ತ ಸಿಕ್ಕಿದ ಹಣದಲ್ಲಿ ತಮ್ಮ ಅಹನ್ಯಹನಿ ಸಂಸಾರವನ್ನು ಸಾಗಿಸುತ್ತಿದ್ದರು. ಮಧ್ಯವರ್ತಿ ಅವನ್ನು ಏನು ಮಾಡಿದ ಎನ್ನುವುದು ಯಾರಿಗೂ ಗೊತ್ತಿಲ್ಲ. ರಸಗೊಬ್ಬರ ಕಾರ್ಖಾನೆಯವರು ಅಥವಾ ಅಮೇರಿಕದ ಏಜೆಂಟರು ಸಾಂಪ್ರದಾಯಿಕ ಕೃಷಿಯನ್ನು ನಾಶಮಾಡಲು ಮಾಡಿದ ಹಲವು ತಂತ್ರಗಳಲ್ಲಿ ಇದೂ ಒಂದು ಎಂದು ಆಮೇಲೆ ಕೆಲವರು ಮಾತಾಡಿಕೊಳ್ಳುತ್ತಿದ್ದುದಿದೆ.

ಕಪ್ಪೆ ಹಿಡಿಯುವುದು ಒಂದು ಪರ್ಮನೆಂಟ್ ಕೆಲಸವೇನೂ ಅಲ್ಲ. ಅವಕಾಶ ಇದ್ದಾಗ ದುಡಿದುಕೊಂಡದ್ದು ಬಂತು. ಬಹುಶಃ ಕಪ್ಪೆಗಳು ಸಿಗುವುದು ಕಡಿಮೆಯಾದಾಗ ಅಥವಾ ಏಜೆಂಟನು